ಮನೆಯ ಸದಸ್ಯರನ್ನ ಆಚೆ ಕರೆಸಿ ಮುಲಾಜಿಲ್ಲದೆ ಆ ನೀರನ್ನೆಲ್ಲ ಅದೇ ಸಿದ್ದಮ್ಮನ ಕೈಯ್ಯಲ್ಲೆ ಚೆಲ್ಲಿಸಿಬಿಟ್ಟರು. ಅಲ್ಲಿ ಹಟ್ಟಿ ಬಯಲಲ್ಲಿ ನಿಂತಿದ್ದ ಸಿದ್ದಮ್ಮನಿಗಿಂತ ಕಿರಿಸೊಸೆಗೆ ಮುಖ ಬಿಳುಪಾಗಿ ಬಣ್ಣ ಬಣ್ಣಗಳ ಬಗ್ಗಿಸಿ ಗಿಚ್ಚಿದರೆ ಒಂದು ತೊಟ್ಟು ರಕುತವಿಲ್ಲದಂತಾಗಿ ಸುಟ್ಟ ಬದನೆಕಾಯಿಯಾದಂತಾಯಿತು. ಯಾಕೆಂದರೆ ಆ ಡ್ರಮ್ಮಿನಲ್ಲಿ ಇದ್ದ ನೀರು ಹದಿನೈದು ಬಿಂದಿಗೆ ನೀರು, ಅನ್ಯಾಯವಾಗಿ ಅವಳ ಕಣ್ಣಮುಂದೆ ಸಳ ಸಳನೆ ಉರುಳುರುಳಿ ಕಣ್ಣುಮರೆಯಾದವು. ಈಗ ಅವಳು ಅಷ್ಟು ನೀರನ್ನ ತುಂಬಿಸೊವ್ರೊತ್ತಿಗೆ ಹೊಟ್ಯಾಗಳ ಕಳ್ಳು ಬಾಯಿಗೆ ಬಂದಾತಾಗುತ್ತದೆ ಎಂಬೊ ಭಾದೆ ಇನ್ನಿಲ್ಲದೆ ಕಾಡತೊಡಗಿತು. ತವರಿನಲ್ಲಿ ಎಂದು ಯಾವತ್ತು ಒಂದು ಕಡ್ಡೀನೂ ಎತ್ತಿಡದೆ ಬೆಳೆದು ಬಂದ ಹುಡುಗಿಗೆ, ಇವತ್ತು ಅಷ್ಟು ನೀರು ಎಂಗೆ ತುಂಬಿಸಬೇಕೆಂಬ ಕೆಂಡಾಮಂಡಲದ ಸಿಟ್ಟು ಅವಳ ನೆತ್ತಿ ಬಾಯಿಂದ ಅಂಗಾಲಿನವರೆಗು ಬಗ ಬಗನೆ ಉರಿಯಲಾರಂಭಿಸಿತ್ತು. ಸಿದ್ಧಮ್ಮನ ಅಸಹನೆ ಅಲ್ಲಿಗೆ ಸುಮ್ಮನಿರಲಾರದೆ ನೆನ್ನೆ ಬೆಳಗ್ಗೆ ಹನ್ನೊಂದು ಘಂಟೆಯ ಸಮೇವಿನೊಳಗೆ, ಬರಬರನೆ ಹೋದವಳು 'ಇದ್ಯಾಕಲಾ ಜಯಮ್ಮ ಇಷ್ಟೆ ಇಷ್ಟು ನೀರು ಚೆಲ್ಲಾಕಾಗಿ ನಿನ್ನ ಆಸ್ಪತ್ರೆಯ ದಂಡೆ ಕರಕಂಡು ಬಂದಿದ್ದೀಯಾ. ನಿನಗೇನು ಮಾನ ಮರ್ಯಾದೆ ಇಲ್ಲವೇನುಡುಗಿ? ಬಾ ಈಗ್ ನನ್ನ ಡ್ರಮ್ಮಿಗೆ ಎಷ್ಟು ಚೆಲ್ಲಿಸಿದ್ದೀಯೋ ಅಷ್ಟು ನೀರುನು ನೀನೆ ತುಂಬಿಸಿಕೊಡು' ಎಂದು ಜಯಮ್ಮನ ಮನೆವರುಗು ಎದುರುಸಿರು ಎಳಕೊಂಡು ಅವಳ ಹಟ್ಟಿ ಬಯಲಲ್ಲಿ ನಿಂತು ಬಿಟ್ಲು. ಇಂತ ತಪ್ಪಿಲ್ಲದ ತಪ್ಪುಗಳ ಪಟ್ಟಿಯನ್ನ ಮೆತ್ತಿಸಿಕೊಳ್ಳುತ್ತಿದ್ದ ಮತ್ತು ಸಹಿಸಿ ಕೊಂಬುತ್ತಿದ್ದ ಜಯಮ್ಮನಿಗೆ ಇವತ್ಯಾಕೊ ಜೀವಮಾನದುದ್ದಕ್ಕು ಬಾರದ ಬಿಟ್ಟು ಕುಂತುಕೊಳ್ಳುವ ಸಿಟ್ಟೆಂಬೋದು ತಟ್ಟ ತಟ್ಟ ಅದು ಮೈಯ್ಯೊಳಗೆ ಕರೆಂಟು ಬಂದಂಗಾಗ ಬಿಡತು. 'ಯಕ ನಿನಗೆ ತಲೆ ನೆಟ್ಟಗೈತೋ ಇಲ್ಲವ್ರೊ? ನಾನ್ಯಾಕ್ ಕರ್ ಕಂಡು ಬರಲಿ? ಅವರೆ ಬಂದು ಚೆಲ್ಲಿರೋದು ತಾಕತಿದ್ರೆ ನೀನು ಆಸ್ಪತ್ರೆಯವರನ್ನೇ ಕೇಳೋಗು ನನಮುಂದೇನು ಗುಲುಗು ಬ್ಯಾಡ' ಎಂದು ಮುಲಾಜಿನಾಚೆ ಮಾತು ಮುಕ್ಕಳಿಸಿದಳು. ಒಳಗಿದ್ದ ಐನಾತಿ ಗಂಡನೆಂಬೋನು ದಡ ದಡನೆ ಹಟ್ಟಿಬಾಗಿಲಿಗೆ ಬಂದು 'ಊನಕ್ಕಯ್ಯ ಕಂಡ್ರು ಕಾಣದಂಗೆ ಡ್ಯೂಟಿ ಮಾಡು ಅಂತ ನಾನೆಷ್ಟು ಉಗುತ್ರು ಇವಳಿಗೆ ಬುದ್ಧಿ ಬರ್ ತಿಲ್ಲ. ನೀನಾದ್ರು ಉಗಿಯಕ' ಎಂದು ಮುಖ ಹಿಗ್ಗಲಿಸಿಕೊಂಡು ಹೇಳ್ದವನ ಮಾತಿಗೆ, 'ನಡಿಯೊ ನಾರ್ದ ಒಳಿಕ್ಕೆ. ನಾನು ದುಡುದ್ರೆ ಅಲ್ಲವೇನೊ? ನೀನು ಹೊತ್ತೊತ್ತಿಗೆ ಉಂಬಾದು, ಇದ್ರಾಗೆ ಅವಳುಗಿಯಾದೇನೈತೆ ನೀನುಗಿಯಾದೇನೈತೊ? ಮಾಡೊ ಕೆಲಸ ನಿಯ್ಯತ್ತಾಗಿರ್ ಬ್ಯಾಡವೇನೊ? ಮನಿಯಾಳ' ಮಾತು ಜಯಮ್ಮನ ಎದೆ, ಬಾಯಿ, ಮನಸ್ಸು, ಮೌನ ಎಲ್ಲವನ್ನು ಸೀಳಿಕೊಂಡು ಇವತ್ತು ಅಟ್ಟ ಹಾಸದಿಂದ ಈಚೆಬಂದು ನೆರೆಹೊರೆಯ ಜನ ಬೆಚ್ಚಿ ಬಿದ್ದಂಗಾಯಿತು. ಅಂತ ಜನ ಎಂದು ನೋಡದ ಅವಳ ಎದೆಗುಂಡಿಗೆಯಿಂದ ಇಷ್ಟೊಂದು ಮಾತುಗಳು ಸಲೀಸಾಗಿ ಈಚೆ ನುಗ್ಗಿದ್ದು ನೋಡಿ, 'ಯವ್ವ ಇವಳು ನಿಜವಾದ ಜಯಮ್ಮನೆ? ಇಲ್ಲ ಇವಳಿಗೇನಾರ ದೆವ್ವ ಗಿವ್ವ ಮೆಟ್ಟಿಕೊಂಡೈತಾ?' ಎಂದು ಬಿಟ್ಟ ಬಾಯಿಕಣ್ಣು ಬಿಟ್ಟುಗೊಂಡು ಕಟ್ಟು ಕದಲದಂಗೆ ಬೀದಿಮ್ಯಾಲೆ ನೋಡುತ್ತ ನಿಂತಿದ್ದರು. ಯಾಕೆಂದರೆ ನೆನ್ನೆದಿನ ಅವಳು ಆಸ್ಪತ್ರೇಲಿ ಮೀಟಿಂಗ್ ಎಂದು ಹೋದವಳು ಎಷ್ಟೊತ್ತಾದರು ಮನೆಗೆ ಬರಲಿಲ್ಲವೆಂಬ ಮಾತಿಗೆ ಮಾತುಗಳು ಪೈಪೋಟಿಯಾಗಿ ಜಯಮ್ಮುನ್ನ ನರಸಿಂಹನೆಂಬ ಗಂಡ ವಿನಾಕಾರಣವಾಗಿ ಹೊಡದೆ ಬುಟ್ಟ. ಅಂತಾ ಒದೆ ಬಿದ್ದರೂ ಸುಮ್ಮನೆ ಉಸಿರು ಬಿಡದಂಗಿದ್ದವಳು ಇವತ್ಯಾಕೊ ಕೆಂಡಾಮಂಡಲವಾಗಿ ಉರಿಯುವ ಬಿಸಿಲಿನ ಹಟ್ಟಿ ಬಯಲಲ್ಲಿ ಕುಂತವಳನ್ನ ಹೊಡೆಯಲು ಹತ್ತಿರಕ್ಕೆ ಬಂದ ಗಂಡನ ಎರಡೂ ಕೈಗಳನ್ನು ಬಿಗಿಯಾಗಿ ಹಿಡುಕೊಂಡು ತಿರು ಮೆಟ್ಟಿದಳು. 'ಹೋಗಲಾ ನಿನದಂಡು ದಾಳಿ ಏನೇನೈತೊ ತಗಂಡು ಬಾ ನನ್ನ ತಪ್ಪೇನಿದ್ದರೂ ತಲೆ ಬಾಗತ್ತೀನಿ' ಎಂದು ಯಗಾದಿಗಿಯಾಗಿ ನಿಂತುಬಿಟ್ಟಳು. ಊರಲ್ಲಿ ಸೊಳ್ಳೆಯಿಂದ ಕೆಲವರಿಗೆ ನಿಜವಾಗೆ ಡೇಂಗ್ಯುಜ್ವರ ಬಂದಿದ್ದರೆ ಇವತ್ತು ಸಿದ್ದಮ್ಮನಿಗೂ ಮತ್ತು ಆ ಮನೆಯ ಯಜಮಾನ ನರಸಿಂಹನಿಗೂ, ಈ ಆಶಾ ಕಾರ್ಯಕರ್ತೆ ಜಯಮ್ಮನ ಬಿಟ್ಟುಕುಂತಿರುವ ವೀರಾವೇಶವನ್ನೆದುರಿಸಲಾರದೆ ಇಬ್ಬರಿಗೂ ನಿಂತಲ್ಲೆ ನಿಂತು ಡೇಂಗ್ಯುಜ್ವರ ಬಂದಂಗಾಗಿ ಅವರವರ ಕೈಕಾಲುಗಳು ಕುಸಿಬಿದ್ದಂಗಾದುವು. ●